ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್‌ನ ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿನ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸಿನ ಪ್ರವೇಶ ಮಿತಿಯನ್ನು ಹೆಚ್ಚಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:
1. ಆಯುಷ್ ನಿರ್ದೇಶಕರ ಪ್ರಸ್ತಾವನೆ ಸಂಖ್ಯೆ:ಆಯುಷ್/22/ಅಭಿವೃದ್ಧಿ(2)/2015–16, ದಿನಾಂಕ:15.09.2017.
2. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ACA/AFF/HY-03/2017-18, ದಿನಾಂಕ:01/04/2017.
3. ಸರ್ಕಾರದ ಪತ್ರ ಸಂಖ್ಯೆ:ಆಕುಕ 29 ಪಿಟಿಡಿ 2017, ದಿನಾಂಕ:05.04.2017.
4. ಆಯುಷ್ ಮಂತ್ರಾಲಯದ ಪತ್ರ ಸಂಖ್ಯೆ:R.13014/02/2016-EP (H), dated: 11.09.2017.

BBHMC & H
Bangalore – 560 056
Ref. No. ..116..........
Date..13-10-2017..
Signature ........

***

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಸಂ (1)ರ ಪ್ರಸ್ತಾವನೆಯಲ್ಲಿ, ನಿರ್ದೇಶಕರು, ಆಯುಷ್ ಇಲಾಖೆ, ಬೆಂಗಳೂರು ಇವರು ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿನ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶ ಮಿತಿಯನ್ನು 2017–18ನೇ ಶೈಕ್ಷಣಿಕ ಸಾಲಿನಿಂದ 75 ರಿಂದ 100 ಕ್ಕೆ ಹೆಚ್ಚಿಸಿಕೊಳ್ಳಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಅಫಿಲಿಯೇಷನ್ ನೀಡಿದ್ದರ ಮೇರೆಗೆ ರಾಜ್ಯ ಸರ್ಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಒದಗಿಸಲಾಗಿದ್ದು, ಪ್ರಸ್ತುತ ಕೇಂದ್ರ ಸರ್ಕಾರವು ಸದರಿ ಕೋರ್ಸ್‌ನ ಪ್ರವೇಶ ಮಿತಿ ಹೆಚ್ಚಳಕ್ಕೆ ಕೆಲವು ಷರತ್ತಿಗೊಳಪಟ್ಟು ಅನುಮತಿ ನೀಡಿರುತ್ತದೆ. ಅದರಂತೆ 2017–18ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಸರ್ಕಾರದ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಸಂ (2)ರ ಪತ್ರದಲ್ಲಿ ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿ 2017–18ನೇ ಶೈಕ್ಷಣಿಕ ಸಾಲಿಗೆ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿಯನ್ನು 75 ರಿಂದ 100 ಕ್ಕೆ ಹೆಚ್ಚಿಸಿಕೊಳ್ಳಲು ಅಫಿಲಿಯೇಷನ್ ನೀಡಿರುವುದಾಗಿ ತಿಳಿಸಿರುತ್ತಾರೆ.

ATTESTED

ಮೇಲೆ ಓದಲಾದ ಕ್ರಸಂ (3)ರ ಸರ್ಕಾರದ ಪತ್ರದೊಂದಿಗೆ, ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿ 2017–18ನೇ ಶೈಕ್ಷಣಕ ಸಾಲಿನಿಂದ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿಯನ್ನು 75 ರಿಂದ 100 ಸೀಟ್‌ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

Principal
Bhagawan Buddha Homoeopathic
Medical College
No. 103/6, 40 Feet Road, NGEF Layout,
Mallathalli, Bangalore - 560 056.

ಮೇಲೆ ಓದಲಾದ ಕ್ರ.ಸಂ (4)ರ ಪತ್ರದಲ್ಲಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯವು ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿ 2017–18ನೇ ಶೈಕ್ಷಣಿಕ ಸಾಲಿಗೆ ಬಿ.ಎ.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿಯನ್ನು 75 ರಿಂದ 100 ಸೀಟ್‌ಗಳಿಗೆ ಹೆಚ್ಚಿಸಲು ಷರತ್ತುಬದ್ಧ ಅನುಮತಿ ನೀಡಿರುತ್ತದೆ.

ಆಯುಷ್ ನಿರ್ದೇಶಕರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿಯನ್ನು 75 ರಿಂದ 100 ಸೀಟ್‌ಗಳಿಗೆ ಹೆಚ್ಚಿಸಲು ಅನುಮತಿ ನೀಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 269 ಪಿಟಿಡಿ 2017, ಬೆಂಗಳೂರು, ದಿನಾಂಕ:04.10.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್‌ನ ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ನಂ. 103/6, 40 ಅಡಿ ಬಿಡಿಎ ರಸ್ತೆ, ಎನ್‌ಜಿಇಎಫ್ ಲೇಔಟ್, ವಿನಾಯಕ ದೇವಸ್ಥಾನದ ಹತ್ತಿರ, ಮಲ್ಲತ್ತಹಳ್ಳಿ, ಬೆಂಗಳೂರು ಇಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿಯನ್ನು 75 ರಿಂದ 100 ಸೀಟ್‌ಗಳಿಗೆ ಹೆಚ್ಚಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿಸಿರುವ ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ನ ಪ್ರವೇಶಮಿತಿ ಹೆಚ್ಚಿಸಲು ಭಾರತ ಸರ್ಕಾರ/ಸಿ.ಸಿ.ಐ.ಎಂ/ಸಿ.ಸಿ.ಹೆಚ್. ನವದೆಹಲಿ ಇವರಿಂದ ಅನುಮೋದನೆಯನ್ನು ಪಡೆಯತಕ್ಕದ್ದು.
2. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
4. ಭಾರತ ಸರ್ಕಾರ/ಸಿ.ಸಿ.ಐ.ಎಂ/ಸಿ.ಸಿ.ಹೆಚ್. ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ಕೇಂದ್ರ/ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
7. ಸರ್ಕಾರದ ಪೂರ್ವಾನುಮತಿಯಿಲ್ಲದೇ ಸಂಸ್ಥೆಯ ಹೆಸರು ಮತ್ತು ವಿಳಾಸವನ್ನು ಬದಲಾಯಿಸಬಾರದು.|
8. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
(ದೂರವಾಣಿ ಸಂಖ್ಯೆ:22034292)

**ಇವರಿಗೆ:**

1) Secretary to Government, Ministry of AYUSH, AYUSH Bhawan, B.Block, GPO Complex, New Delhi-110 023. (R.12011/06/2015-EP (IM-1).

2) ನಿರ್ದೇಶಕರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-09.
3) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು.
4) ಪ್ರಾಚಾರ್ಯರು, ಭಗವಾನ್ ಬುದ್ಧ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ನಂ. 103/6, 40 ಅಡಿ ಬಿಡಿಎ ರಸ್ತೆ, ವಿನಾಯಕ ದೇವಸ್ಥಾನದ ಹತ್ತಿರ, ಮಲ್ಲತ್ತಹಳ್ಳಿ, ಬೆಂಗಳೂರು

ಪ್ರತಿಗಳು:-

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು-1.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ATTESTED

Principal
Bhagawan Buddha Homoeopathic
Medical College
No. 103/6, 40 Feet Road, NGEF Layout,
Mallathalli, Bangalore - 560 056.